ಅಸಲು ದಾವೆ ಸಂಖ್ಯೆ - 125/2016
ಪಿಡಬ್ಲ್ಯೂ - 01
ದಿನಾಂಕಃ 11.01.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದ

ನಾನು ಈ ದಾವೆಯನ್ನು ಹೊಲದ ಸಲುವಾಗಿ ಮಾಡಿರುತ್ತೇನೆ. ಈ ದಾವೆಯನ್ನು ನಾಗಪ್ಪ, ನೀಲವ್ವ, ಸಾವಂತ್ರವ್ವ ಮತ್ತು ಚನ್ನಮ್ಮ ಇವರ ವಿರುದ್ದ ಮಾಡಿರುತ್ತೇನೆ ದಾವಾ ಆಸ್ತಿಗಳ ಪಹಣಿಗಳಲ್ಲಿ ಪ್ರತಿವಾದಿಯರ ತಾಯಿ ದುರ್ಗವ್ವ ಇವಳ ಹೆಸರು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಓದಲು ಬರುವುದಿಲ್ಲ. ನಾನು ಹಾಜರುಪಡಿಸಿದ ಪಹಣಿಗಳಲ್ಲಿ ಯಾರ ಹೆಸರು ಇರುತ್ತದೆ ಎಂದು ಓದಿ ಹೇಳಲು ನನಗೆ ಬರುವುದಿಲ್ಲ. ದುರ್ಗವ್ವ ದುಂಡಪ್ಪ ಮಾದರ ಇವಳ ಹೆಸರು ಪಹಣಿಯಲ್ಲಿರುತ್ತದೆ ಎಂದರೆ 2016 ರಿಂದ ಈಚೆಗೆ ಮಾಡಿಕೊಂಡಿರುತ್ತಾರೆ. ನಾನು ದುರ್ಗವ್ವಳನ್ನು ನೋಡಿಲ್ಲ. ದುರ್ಗವ್ವ ಯಾವಾಗ ತೀರಿಕೊಂಡಿರುತ್ತಾಳೆ ನನಗೆ ಗೊತ್ತಿಲ್ಲ. ಸದರಿ ದುರ್ಗವ್ವ ಗುಡ್ಡಪ್ಪನ ಮಗಳು ಎಂದರೆ ಸರಿ. ಗುಡ್ಡಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಗುಡ್ಡಪ್ಪನ ಅಜ್ಜ ಹೆಗ್ಗಪ್ಪ ಎಂದರೆ ನನಗೆ ಗೊತ್ತಿಲ್ಲ. ಹೆಗ್ಗಪ್ಪನಿಗೆ ಗಾಳೆಪ್ಪ ಮತ್ತು ದುರಗಮ್ಮ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಗಾಳೆಪ್ಪನಿಗೆ ಹೆಗ್ಗಪ್ಪ ಮತ್ತು ಉಡಚಮ್ಮ ಅಂತಾ ಇಬ್ಬರು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಹೆಗ್ಗಪ್ಪನಿಗೆ ಗಂಗಪ್ಪ ಮತ್ತು ಉಡಚಮ್ಮನಿಗೆ ಮಲ್ಲಾರೆಪ್ಪ ಅಂತಾ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮಲ್ಲಾರೆಪ್ಪನಿಗೆ 6 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು 1.ಪುಟ್ಟವ್ವ, 2.ನಿಂಗವ್ವ, 3. ಮಾಯವ್ವ, 4.ಮಾಳವ್ವ, 5.ಕರಿಯವ್ವ, 6. ಮಲ್ಲಪ್ಪ ಅಂತಾ ಮಕ್ಕಳು ಇದ್ದರು ಎಂದರೆ ಸರಿ. ಅವರ ಪೈಕಿ ಪುಟ್ಟವ್ವ ಮತ್ತು ಮಲ್ಲಪ್ಪ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮಲ್ಲಪ್ಪನ ಮಕ್ಕಳು ನಾವು ಎಲ್ಲಾ ವಾದಿಯರು ಎಂದರೆ ಸರಿ.

ಹೆಗ್ಗಪ್ಪನ ಮಗಳು ದುರಗಮ್ಮನಿಗೆ ನೀಲಪ್ಪ ಮತ್ತು ಗುಡ್ಡಪ್ಪ ಅಂತಾ ಇಬ್ಬರು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಗುಡ್ಡಪ್ಪನ ಮಗಳು ಪ್ರತಿವಾದಿಯರ ತಾಯಿ ದುರಗವ್ವ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ದುರಗಮ್ಮ ಗುಡ್ಡಪ್ಪನ ಸಾಕು ಮಗಳು, ಸ್ವಂತ ಮಗಳು ಅಲ್ಲ ಅಂತಾ ನುಡಿಯುತ್ತಾರೆ. ದುರಗಮ್ಮನ ಸ್ವಂತ ತಂದೆ ಯಾರು ಅಂತಾ ನನಗೆ ಗೊತ್ತಿಲ್ಲ. ಗುಡ್ಡಪ್ಪನೇ ಸದರಿ ದುರಗಮ್ಮನ ಖಾಸಾ ತಂದೆ ಎಂದರೆ ಸರಿಯಲ್ಲ. ದುರಗಮ್ಮ ಸಾಕು ಮಗಳು ಅಂತಾ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ದುರಗಮ್ಮನ ಮಕ್ಕಳು ಪ್ರತಿವಾದಿ ನಂ.1 ರಿಂದ 4 ಎಂದರೆ ಸರಿಯಲ್ಲ, ಸಾಕ್ಷಿ ಸ್ವತಃ ಸದರಿ

ದುರಗವ್ವ ಲಗ್ನ ಆಗಿರಲಿಲ್ಲ ಅಂತಾ ನುಡಿಯುತ್ತಾರೆ. ದುರಗವ್ವ ಸತ್ತಾಗ ನಾನು ಇನ್ನೂ ಹುಟ್ಟಿರಲಿಲ್ಲ ಎಂದರೆ ಸರಿ. ಪ್ರತಿವಾದಿಯರು ಆಕೆಯ ಖಾಸಾ ಮಕ್ಕಳು ಎಂದರೆ ಸರಿಯಲ್ಲ. ಪ್ರತಿವಾದಿಯರ ನಾಲ್ಕು ಜನರ ವಯಸ್ಸು 60 ರ ಮೇಲೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ನಾಗಪ್ಪ ಧಾರವಾಡ ಕೆವಿಜಿ ಬ್ಯಾಂಕಿನಲ್ಲಿ ಮ್ಯಾನೇಜರ್ ಇದ್ದ ಎಂದರೆ ನನಗೆ ಗೊತ್ತಿಲ್ಲ. ಆತ ನಿವೃತ್ತಿಯಾಗಿ ಎರಡು ವರ್ಷ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಕಬ್ಜಾ ಮತ್ತು ವಹಿವಾಟಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ.

ದಿಃ 01.01.2016 ರಂದು ಪ್ರತಿವಾದಿಯರು ನಮ್ಮ ಕಬ್ಜಾ ವಹಿವಾಟಿಗೆ ಹರಕತ್ ಮಾಡಿರುತ್ತಾರೆ. ನಾಗಪ್ಪ ವೀರಾಪೂರ ಇವರು ಬಂದು ಹರಕತ್ ಮಾಡಿರುತ್ತಾರೆ. ನಾಗಪ್ಪ ವೀರಾಪೂರ ಇತನನ್ನು 6 ವರ್ಷದಿಂದ ನೋಡುತ್ತಿದ್ದೇನೆ. ದಾವಾ ಆಸ್ತಿಯನ್ನು ಇವತ್ತಿಗೂ ಪ್ರತಿವಾದಿಯರೇ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 08.07.1977 ರಿಂದ ವಾರಸಾ ನಾತೆಯಿಂದ ದುರಗಮ್ಮನ ಹೆಸರು ದಾವಾ ಆಸ್ತಿಗೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. 1977 ರಿಂದ ಇಲ್ಲಿಯವರೆಗೆ ನಾವು ಸದರಿ ಮ್ಯೂಟೇಶನ್‌ನ್ನು ಪ್ರಶ್ನಿಸಿಲ್ಲ ಎಂದರೆ ನಮಗೆ 2004 ರಲ್ಲಿ ಉತಾರ ತೆಗೆಸಿದಾಗ ಗೊತ್ತಾಗಿರುತ್ತದೆ. 2004 ರಿಂದ ಇಲ್ಲಿಯವರೆಗೆ ಸದರಿ ಮ್ಯೂಟೆಶನನ್ನು ಪ್ರಶ್ನಿಸಿಲ್ಲ ಎಂದರೆ ನಾವು ಆಗ ಸಣ್ಣವರಿದ್ದೆವು, ಆದ್ದರಿಂದ ಪ್ರಶ್ನಿಸಿಲ್ಲ. ನಾವು ದೊಡ್ಡವರಾದ ನಂತರವೂ ಸದರಿ ಖಾತೆಯನ್ನು ಪ್ರಶ್ನಿಸಿಲ್ಲ ಎಂದರೆ ಸರಿ. ನಾನು 1986 ರಲ್ಲಿ ಹುಟ್ಟಿರುತ್ತೇನೆ.

ಪ್ರತಿವಾದಿಯರು 1977 ರಿಂದ ಇಂದಿನವರೆಗೆ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ, ಅವರ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಬೇಕು ಅಂತಾ ಖೊಟ್ಟಿ ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ಗುಡ್ಡಪ್ಪನ ಆಸ್ತಿ ಎಂದರೆ ಸರಿಯಲ್ಲ. ನಾವು ಗುಡ್ಡಪ್ಪನನ್ನಾಗಲೀ ಅಥವಾ ಅವನ ಮಗಳನ್ನಾಗಲೀ ನೋಡಿಲ್ಲ. ನಾವು ಯಾವುದೇ ಸಂಬಂಧ ಇಲ್ಲದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹುಟ್ಟುವ ಪೂರ್ವದಲ್ಲಿ ಏನು ಆಗಿರುತ್ತದೆ ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿ. ನನ್ನ ತಂದೆ 13-14 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ನಾಗಪ್ಪ ವೀರಾಪೂರಕ್ಕಿಂತ ಸಣ್ಣವ ಎಂದರೆ ಸರಿಯಲ್ಲ, ಅವರೇ ದೊಡ್ಡವರು. ದುರಗಮ್ಮ ಮತ್ತು ಗುಡ್ಡಪ್ಪನ ಆಸ್ತಿಗೆ ನಾವು

ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಗಾಳೆಪ್ಪನ ವಂಶದಲ್ಲಿ ಬರುತ್ತೇವೆ ಎಂದರೆ ಸರಿ. ಪ್ರತಿವಾದಿಯರು ಗುಡ್ಡಪ್ಪ ಇವರ ವಂಶದಲ್ಲಿ ಬರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಗುಡ್ಡಪ್ಪನ ವಂಶದಲ್ಲಿ ಬರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಗಾಳೆಪ್ಪ ಮತ್ತು ದುರಗಮ್ಮ ಇವರು ಬೇರೆ ಬೇರೆ ವಂಶ ಇರುವುದರಿಂದ ವಾಟ್ನಿ ಮಾಡಿಕೊಂಡು ಪ್ರತ್ಯೇಕವಾಗಿ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ಆಸ್ತಿ ನಿಮ್ಮದು ಅಂತಾ ಹೇಳುತ್ತಿದ್ದೀರಿ ಎಂದರೆ ಆಸ್ತಿ ಮೂಲತಃ ಗಂಗಪ್ಪ ಗಾಳೆಪ್ಪನವರ ಮತ್ತು ಗಂಗಪ್ಪನ ಹೆಂಡತಿ ನಾಗವ್ವ ಇವರದು ಅಂತಾ ದಾವೆ ಹೂಡಿರುತ್ತೇನೆ. ಗಂಗಪ್ಪನಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ನನ್ನ ಅಜ್ಜನ ಹೆಸರು ಮಲ್ಲಾರೆಪ್ಪ ಎನ್ನುವುದು ಸರಿ. ಮಲ್ಲಾರೆಪ್ಪನ ಹಿಸ್ಸೆದ ಆಸ್ತಿಗೆ ಮಾತ್ರ ಸಂಬಂಧ ಎಂದರೆ ಮಲ್ಲಾರೆಪ್ಪ ಮತ್ತು ಗಂಗಪ್ಪನ ಇಬ್ಬರ ಆಸ್ತಿಗೂ ಸಂಬಂಧ ಇರುತ್ತೇವೆ. ಮಲ್ಲಾರೆಪ್ಪ ಮತ್ತು ಗಂಗಪ್ಪನ ಆಸ್ತಿ ಬಿಟ್ಟು ಬೇರೆಯವರ ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸರಿ. ನಾನು ಖಾಯಂ ತರೀಖ ಮಂಗಳೂರಿನಲ್ಲಿ ವಾಸಿಸುತ್ತೇನೆ. ಮಂಗಳೂರಿನಲ್ಲಿ ಗೌಂಡಿ ಕೆಲಸ ಮಾಡುತ್ತೇನೆ. ನಾನು ಖಾಯಂ ತರೀಖ ಮಂಗಳೂರಿನಲ್ಲಿ ವಾಸಿಸುತ್ತಿದ್ದರಿಂದ ದಾವಾ ಆಸ್ತಿಯನ್ನು ಸಾಗುವಳಿ ಮಾಡುವುದಿಲ್ಲ ಎಂದರೆ ಸರಿಯಲ್ಲ, ನಾನು ದುಡಿಯಲು ಮಂಗಳೂರಿಗೆ ಹೋಗಿರುತ್ತೇನೆ, ಖಾಯಂ ತರೀಖ ವಾಗಿ ಮಂಗಳೂರಿನಲ್ಲಿ ಇರುವುದಿಲ್ಲ. 1 ನೇ ಪ್ರತಿವಾದಿ ಬೇರೆಯವರಿಂದ ದಾವಾ ಆಸ್ತಿ ಉಳುಮೆ ಮಾಡಿಸುತ್ತಿದ್ದ ಎಂದರೆ ಸರಿಯಲ್ಲ. ಆತ ನಿವೃತ್ತಿಯಾದ ನಂತರ ಸ್ವತಃ ಉಳುಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಅಂತಾ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮನೆತನದಿಂದ ಸ್ಥಿತಿವಂತರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಸಹಿಸಲಾರದೇ ಅವರಿಗೆ ತೊಂದರೆ ಕೊಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ನಾವು ಎಂದೂ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹಿಸ್ಸೆಯ ಆಸ್ತಿಯನ್ನು ಲಾವಣಿ ಹಾಕುತ್ತೇವೆ ಎಂದರೆ ಸರಿ. ನಾವು ಸ್ವತಃ ಎಂದೂ ಸಾಗುವಳಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯರ ಇವತ್ತಿಗೂ ದಾವಾ ಆಸ್ತಿಯಲ್ಲಿ ಕಬ್ಜೆ ವಹಿವಾಟಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.